**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 201/2024**

| | | | |
|---|---|---|---|
| ಹೆಸರು | | ಶ್ರೀ ಮಹಾಲಕ್ಷ್ಮೀ | ಚಾಸಾಃ 03 |
| ತಂದೆಯ ಹೆಸರು | | ಶ್ರೀ ನಾಗರಾಜು | ಫ್ರಾಸಾಃ 03 |
| ವಯಸ್ಸು | | 15 ವರ್ಷ | ಸಾಕ್ಷಿಯನ್ನು ದಿನಾಂಕಃ 25.10.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವಿದ್ಯಾರ್ಥಿನಿ | |
| ವಾಸ | | ಚಿಕ್ಕ ಬೇಗೂರು ಗ್ರಾಮ | |

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-</u>**

ಚಾಸ-1 ನನ್ನ ತಂದೆ. ಚಾಸ-2 ನನ್ನ ತಾಯಿ. ದಿಃ 03.11.2023 ರಂದು ಆರೋಪಿಗಳು ನನ್ನ ತಾಯಿಗೆ ಹಲ್ಲೆ ಮಾಡುತ್ತಿದ್ದರು. ಆಗ ಸಮಯ ಬೆಳಿಗ್ಗೆ 7.00 ಗಂಟೆಯಾಗಿತ್ತು. ಜಾಗದ ವಿಷಯಕ್ಕೆ ಆರೋಪಿಗಳು ನನ್ನ ತಾಯಿಗೆ ಹಲ್ಲೆ ಮಾಡುತ್ತಿದ್ದರು. 2ನೇ ಆರೋಪಿ ಬಾಡ್ಲಿಯಿಂದ ನನ್ನ ತಾಯಿಯ ತಲೆಗೆ ಹೊಡೆದರು. ಆರೋಪಿಗಳು ನನ್ನ ತಾಯಿಯ ಜುಟ್ಟನ್ನು ಹಿಡಿದು ಕೆಳಗೆ ಬಳಿಸಿ ಹಲ್ಲೆ ಮಾಡಿದರು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**<u>ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ</u>**

ದಿಃ 26.11.2023 ರಂದು ಬೆಳಿಗ್ಗೆ 7.00 ಗಂಟೆ ಸಮಯಕ್ಕೆ ನನ್ನ ತಾಯಿ ಪುಟ್ಟಮಾದಮ್ಮರವರ ಖಾಲಿ ನಿವೇಶನದಲ್ಲಿ ದನಕರು ಕಟ್ಟುವ ವಿಷಯಕ್ಕೆ ಆರೋಪಿಗಳು ಗಲಾಟೆ ಮಾಡುತ್ತಿದ್ದರು ಎಂದರೆ ಸರಿ. ಶಬ್ಧವನ್ನು ಕೇಳಿ ಅಲ್ಲಿಗೆ ನಾನು ಹೋದೆ ಎಂದರೆ ಸರಿ. ಆರೋಪಿಗಳು ನನ್ನ ತಾಯಿಗೆ ದನಕರುಗಳನ್ನು ಅಲ್ಲಿ ಕಟ್ಟಿ ಹಾಕಬೇಡ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದರೆ ಸರಿ. ನನ್ನ ತಾಯಿ ಪುಟ್ಟಮಾದಮ್ಮರವರ ಅನುಮತಿ ಪಡೆದು ಕಟ್ಟುತ್ತಿದ್ದೇನೆ ಎಂದು ಉತ್ತರಿಸಿದ್ದಕ್ಕೆ ಮು.ಮಾ1 ರಿಂದ ಆರೋಪಿಗಳು ನನ್ನ ತಾಯಿಯ ತಲೆ ಮತ್ತು ಮೈಕೈಗೆ ಹಲ್ಲೆ ಮಾಡಿದರು ಎಂದರೆ ಸರಿ. ನನ್ನ ತಾಯಿಯ ಬಲಗೈ ಹೆಬ್ಬೆರಳಿಗೆ ಗಾಯವಾಯಿತು ಎಂದರೆ ಸರಿ. 2ನೇ ಆರೋಪಿ ನನ್ನ ತಾಯಿಗೆ ಕೈಗಳಿಂದ ಹಲ್ಲೆ ಮಾಡಿದರು ಎಂದರೆ ಸರಿ. ಗಲಾಟೆ ಕಾಲದಲ್ಲಿ ನನ್ನ ತಾಯಿಯ ಕರಿಮಣಿ ಸರ ಮತ್ತು ತಾಳಿ ಕಿತ್ತುಹೋಗಿ ಕಳೆದುಹೋಯಿತು ಎಂದರೆ ಸರಿ. ಆಗ ನಾನು, ಚಾಸ-1 ಮತ್ತು 4 ರವರು ಹೋಗಿ ಜಗಳ ಬಿಡಿಸಿ ಸಮಧಾನ ಮಾಡಿದೇವು ಎಂದರೆ ಸರಿ. ನಂತರ ನನ್ನ ತಂದೆ ನನ್ನ ತಾಯಿಯನ್ನು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದರು ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಗಲಾಟೆ ನಡೆಯುತ್ತಿದ್ದಾಗ ನಾನು ಮನೆಯಲ್ಲೆ ಇದ್ದೆ ಎಂದರೆ ಸರಿ. ಆಗ ನಾನು ಓದುತ್ತಿದ್ದೆ ಎಂದರೆ ಸರಿ. ನಾನು ಹೋರಗಡೆ ಬಂದು ನೋಡುವ ಕಾಲಕ್ಕೆ ಗಲಾಟೆಯಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಗಲಾಟೆಯಾದಾಗ 10 ಜನ ಇದ್ದರು. ನಾನು ಮತ್ತು ಚಾಸ-4 ರವರನ್ನು ಹೊರತುಪಡಿಸಿ ಸ್ಥಳದಲ್ಲಿ ಹತ್ತು ಜನ ಇದ್ದರು. ಯಾವುದೇ ಗಲಾಟೆಯಾಗದಿದ್ದರು ಚಾಸ-2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯಾಗುತ್ತಿದ್ದ ವಿಷಯವನ್ನು

ಹೊರತುಪಡಿಸಿ ನನಗೆ ಬೇರೆ ವಿಷಯ ಗೊತ್ತಿಲ್ಲ ಎಂದರೆ ಸರಿ. ನನ್ನ ತಂದೆ ನನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನನ್ನ ತಾಯಿಯ ಕೈ ಮುರಿದಿತ್ತು. ಮೂರು ದಿನಗಳ ಕಾಲ ನನ್ನ ತಾಯಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಗಲಾಟೆಯಾದಾಗ ನನ್ನ ತಾಯಿಗೆ ಪ್ರಜ್ಞೆ ತಪ್ಪಿತ್ತು. ಜ್ಞಾನ ಬಂದಿರಲಿಲ್ಲ.

ಆಸ್ಪತ್ರೆಗೆ ದಾಖಲುಮಾಡಿದ ಮರುದಿನ ನನ್ನ ತಾಯಿಗೆ ಪ್ರಜ್ಞೆ ಬಂತು. ನಾನು ಆಸ್ಪತ್ರೆಯಲ್ಲಿ ನನ್ನ ತಾಯಿಯನ್ನು ನೋಡಿಕೊಳ್ಳಲು ಇರಲಿಲ್ಲ. ಗಲಾಟೆಯಾದ ಮೂರು ದಿನಗಳ ನಂತರ ಪೊಲೀಸರು ನಮ್ಮ ಊರಿಗೆ ಬಂದಿದ್ದರು. ಅಲ್ಲಿ ಪೊಲೀಸರು ಘಟನೆ ಬಗ್ಗೆ ನನ್ನನ್ನು ವಿಚಾರಿಸಿದರು. ನನ್ನ ತಾಯಿಗೆ ಆರೋಪಿಗಳು ಹೊಡೆದರು ಎಂದು ಹೇಳಿದೆ. ಪೊಲೀಸರು ನಮ್ಮ ಗ್ರಾಮಕ್ಕೆ ಬಂದಿರಲಿಲ್ಲ ಮತ್ತು ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಕೂಲಿ ಕೆಲಸ ಮಾಡಲು ಹೋಗುತ್ತಾರೆ. ನನ್ನ ತಾಯಿ ಕೆಲಸಕ್ಕೆ ಹೋದಾಗ ಬಿದ್ದು ಬೆರಳಿಗೆ ಗಾಯಮಾಡಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಮು.ಮಾ.1 ನಮ್ಮ ಮನೆಯ ಪಡಶಾಲೆಯಲ್ಲಿ ಇತ್ತು. ಅದರಿಂದ ಆರೋಪಿಗಳು ಹಲ್ಲೆ ಮಾಡಿದರು. ಮು.ಮಾ.1 ನ್ನು ನನ್ನ ತಂದೆ ಸ್ಕೂಟರ್ ನಿಂದ ಬೇಗೂರಿನ ಠಾಣೆಗೆ ಹೋಗಿ ನೀಡಿದರು. ಆರೋಪಿಗಳು ನನ್ನ ತಾಯಿ ದನ ಕಟ್ಟುವ ವಿಷಯವಾಗಿ ಜಗಳ ತೆಗೆದು ಯಾವುದೆ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ಕೆಳಗೆ ಬಿಳಿಸಿ ಆರೋಪಿಗಳು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ಚಿನ್ನದ ಅಂಗಡಿಯಿಂದ ಮತ್ತೊಂದು ತಾಳಿಯನ್ನು ನನ್ನ ತಂದೆ ನನ್ನ ತಾಯಿಗೆ ತಂದು ಕೊಟ್ಟರು. ನನ್ನ ತಾಯಿಯ ಕರಿಮಣಿ ಕಿತ್ತುಹೋಯಿತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕರಿಮಣಿಗಳು ಚೆಲ್ಲಿದ್ದವು. ಅವುಗಳನ್ನು ಆಯ್ದು ಪೊಲೀಸರಿಗೆ ಕೊಡಲಿಲ್ಲ. ಕರಿಮಣಿ ಕಿತ್ತುಹೋದ ಬಗ್ಗೆ ನನ್ನ ತಂದೆ ದೂರು ಕೊಟ್ಟಿರಬಹುದು. ಅದು ನನಗೆ ಗೊತ್ತಿಲ್ಲ. ಚಾಸ–4 ರವರು ನನ್ನ ಸಂಬಂಧಿಕರಲ್ಲ. ಚಾಸ–

4ರವರ ಮನೆ ನಮ್ಮ ಮನೆಯ ಪಕ್ಕದಲ್ಲಿದೆ. ಚಾಸ–4 ರವರು ಘಟನಾ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 03.11.2023 ರಂದು ಗಲಾಟೆಯಾಯಿತು. ಸದರಿ ದಿನ ಯಾವುದೆ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಆರೋಪಿಗಳಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**